**ಕಥಾಪ್ರಭ** (ಉಪನಿಷತ್ತಿನ ಕಥೆ)

# ಜಾನಶ್ರುತಿ ಮತ್ತು ಜ್ಞಾನಿ ರೈಕ್ವ

ಸ್ವಾಮಿ ರಾಘವೇಶಾನಂದ

ಇದು ಛಾಂದೋಗ್ಯೋಪನಿಷತ್ತಿನಲ್ಲಿ ಬರುವ ಒಂದು ಕಥೆ. ಅಧ್ಯಾತ್ಮ ವಿದ್ಯೆ ಅಮೂಲ್ಯವಾದುದು. ಅದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಅದು ಕೇವಲ ಗುರುವಿನ ಅನುಗ್ರಹದಿಂದ ಮಾತ್ರ ಪ್ರಾಪ್ತವಾಗುತ್ತದೆ. ಅದನ್ನು ಈ ಕಥೆ ಸೂಚಿಸುತ್ತದೆ.

ಒಮ್ಮೆ ಜಾನಶ್ರುತಿ ಎಂಬ ರಾಜನಿದ್ದ. ಅವನು ಬ್ರಹ್ಮಜ್ಞಾನಕ್ಕೆ ಶ್ರದ್ಧೆ ಮತ್ತು ಅನ್ನದಾನಗಳು ಸಾಧನಾಮಾರ್ಗಗಳು ಎಂದು ತಿಳಿದು, ಶ್ರದ್ಧೆಯಿಂದ ಅನ್ನದಾನ ಮಾಡುತ್ತಿದ್ದನು. ಎಲ್ಲೆಡೆ ಅನ್ನಛತ್ರಗಳನ್ನು ಕಟ್ಟಿಸಿದ್ದರಿಂದಲೂ, ಬಹಳವಾಗಿ ದಾನ ಧರ್ಮಗಳನ್ನು ಮಾಡುತ್ತಿದ್ದರಿಂದಲೂ ಅವನು 'ದಾನಶೂರ ರಾಜ' ಎಂದು ಹೆಸರು ಪಡೆದಿದ್ದನು.

ಹೀಗಿರುವಾಗ ಬೇಸಿಗೆಕಾಲದಲ್ಲಿ ಒಂದು ದಿನ ಅರಮನೆಯ ಉಪ್ಪರಿಗೆಯ ಮೇಲೆ ದೂರ ದಿಗಂತದ ಸೌಂದರ್ಯವನ್ನು ನೋಡುತ್ತ ಮಲಗಿದ್ದನು. ಆಗ ಬಿಳಿಯ ಹಂಸಗಳ ಗುಂಪೊಂದು ಅವನ ತಲೆಯ ಮೇಲೆ ಹಾರಿ ಹೋಗುತ್ತಿತ್ತು. ಅವು ಹಂಸದೇವತೆಗಳು. ಜಾನಶ್ರುತಿಯು ಅಷ್ಟೊಂದು ಪುಣ್ಯಕಾರ್ಯಗಳನ್ನು ಮಾಡುತ್ತಿದ್ದರಿಂದ ಅವನ ಮನಸ್ಸನ್ನು ಬ್ರಹ್ಮಜ್ಞಾನಕ್ಕೆ ತಿರುಗಿಸಬೇಕು ಎಂದು ಉದ್ದೇಶಿಸಿ, ಒಂದು ಹಂಸವು ಮತ್ತೊಂದು ಹಂಸಕ್ಕೆ ಹೀಗೆ ಹೇಳಿತು: "ಓ ಗೆಳೆಯ, ಜಾನಶ್ರುತಿಯ ಪುಣ್ಯದ ಫಲವು ಜ್ಯೋತಿಯ ರೂಪದಲ್ಲಿ ಆಕಾಶದಷ್ಟೆತ್ತರ ಹಬ್ಬಿದೆ. ನೀನೇನಾದರೂ ಅವನ ಮೇಲೆ ಹಾರಿದರೆ ಅದು ನಿನ್ನನ್ನು ಸುಟ್ಟು ಬಿಡುವುದು. ಆ ಜ್ಯೋತಿಯನ್ನು ಕಾಣದಷ್ಟು ನಿನ್ನ ದೃಷ್ಟಿ ಮಂದವಾಗಿದೆಯೇನು? ಪಕ್ಕಕ್ಕೆ ಸರಿದು ಹಾರು" ಎಂದಿತು. ಅದಕ್ಕೆ, ಮುಂದೆ ಹಾರುತ್ತಿದ್ದ ಹಂಸ ಹೇಳಿತು, "ನೀನು ಹೇಳುವುದು ನಿಜ. ಇವನು ಧರ್ಮಾತ್ಮನೇನೋ ಸರಿ. ಅವನ ಪುಣ್ಯವೂ ಅಪಾರ. ಆದರೆ ಅವೆಲ್ಲಾ ಪ್ರಾಪಂಚಿಕ. ಅವು ಅವನನ್ನು ದಿವ್ಯಲೋಕಗಳಿಗೆ ಕೊಂಡೊಯ್ಯಬಹುದು. ಆದರೆ ಆ ಪುಣ್ಯಫಲಗಳೆಲ್ಲಾ ಮುಗಿದ ಮೇಲೆ ಅವನು ಮತ್ತೆ ಜನ್ಮವೆತ್ತಬೇಕಾಗುತ್ತದೆ. **ಇವನೇನು ಜ್ಞಾನಿಯಾದ ಗಾಡಿ ರೈಕ್ವನಿಗೆ ಸಮನಾದವನೇ?** ಅವನು ಬ್ರಹ್ಮಜ್ಞಾನವನ್ನು ಪಡೆದು ಆತ್ಮತೃಪ್ತನಾಗಿ ಬಾಳುತ್ತಿಲ್ಲವೇ? ಅವನಿಗಿಂತ ದೊಡ್ಡವನೇನು ಇವನು?" ಎಂದು ಹೇಳುತ್ತಾ ಹಾರಿ ಮುಂದೆ ಹೋಯಿತು. ಈ ಸಂಭಾಷಣೆಯನ್ನು ಕೇಳಿದ ಜಾನಶ್ರುತಿಯು, ಬ್ರಹ್ಮಜ್ಞಾನಕ್ಕೆ ಸರಿಸಮಾನವಾದುದು ಯಾವುದೂ ಇಲ್ಲ; ಅದು ದೊರಕದವರೆಗೆ, ಹೊರಗಡೆ ಎಷ್ಟೇ ಸಂತೋಷವಿದ್ದರೂ, ಒಂದಲ್ಲ ಒಂದು ತರದ ಆಸೆ ಮತ್ತು ಅತೃಪ್ತಿಗಳು ಅಂತರ್ಯದಲ್ಲಿ ಅಡಗಿರುತ್ತವೆ ಎಂದುಕೊಂಡನು.

ಹಂಸದ ಮಾತುಗಳನ್ನು ಕೇಳಿ ರಾಜನಿಗೆ ಆ ರಾತ್ರಿಯೆಲ್ಲಾ ನಿದ್ರೆಯೇ ಬರಲಿಲ್ಲ. 'ಬ್ರಹ್ಮಜ್ಞಾನ', 'ಬ್ರಹ್ಮಜ್ಞಾನ' ಎಂಬ ಶಬ್ದವೇ ಕಿವಿಯನ್ನೆಲ್ಲಾ ತುಂಬಿತ್ತು. ಬೆಳಿಗ್ಗೆ ಎದ್ದ ತಕ್ಷಣ ಹಂಸ ಹೇಳಿದ ಗಾಡಿ ರೈಕ್ವ ಯಾರು ಎಂದು ಕಂಡುಹಿಡಿಯಬೇಕು ಎನಿಸಿತು. ತಕ್ಷಣ ತನ್ನ ಸಾರಥಿಯನ್ನು ಕರೆದು, "ಹೋಗು, ರೈಕ್ವ ಎನ್ನುವವನು ಯಾರು, ಎಲ್ಲಿದ್ದಾನೆ, ಎನ್ನುವುದನ್ನು ಕಂಡುಹಿಡಿದುಕೊಂಡು ಬಾ" ಎಂದು ಕಳುಹಿಸಿದನು. ಸಾರಥಿಯು ಊರಲ್ಲೆಲ್ಲಾ ಹುಡುಕಿದರೂ ಎಲ್ಲೂ ಆ ಹೆಸರಿನವನು ಸಿಗಲಿಲ್ಲ. ಅವನು ನಿರಾಶೆಯಿಂದ ಬಂದು ರಾಜನಿಗೆ ತಿಳಿಸಿದನು. ರಾಜನು, "ಎಲವೋ, ಬ್ರಹ್ಮಜ್ಞಾನಿಗಳು ನದೀತೀರದಲ್ಲಿ, ಅರಣ್ಯಗಳಲ್ಲಿ ವಾಸಿಸುತ್ತಾರೆ. ಆ ಎಲ್ಲ ಕಡೆ ಹುಡುಕಿ ಕಂಡುಹಿಡಿ" ಎಂದನು. ಎರಡನೆಯ ಬಾರಿಯೂ ಸಾರಥಿಯು ಆ ಗಾಡಿ ರೈಕ್ವನನ್ನು ಕಂಡುಹಿಡಿಯುವುದರಲ್ಲಿ ವಿಫಲನಾದನು.

ಆದರೆ ಒಂದು ಹಳ್ಳಿಯಲ್ಲಿ ಭಿಕ್ಷುಕನಂತೆ, ಮೈಯೆಲ್ಲಾ ಕೊಳಕಾಗಿ, ಒಂದು ಗಾಡಿಯ ಕೆಳಗೆ ಗಲೀಜಾದ ಜಾಗದಲ್ಲಿ ಒಬ್ಬನು ಕುಳಿತಿರುವುದನ್ನು ಗಮನಿಸಿದನು. ಅವನಿಗೋ ಮೈಯೆಲ್ಲ ಕಜ್ಜಿ. ಅವನ ಹೆಸರು ರೈಕ್ವ ಎಂದು ಗೊತ್ತಾಯಿತು. ಸಾರಥಿಯು ಕೇವಲ ಅವನ ಹೊರಗಿನ ಅವಸ್ಥೆಯನ್ನು ಮಾತ್ರ ಗಮನಿಸಿದನೇ ಹೊರತು, ರೈಕ್ವನು ಎಂತಹ ಮಹಾತ್ಮನೆಂದು ಅರಿಯಲಿಲ್ಲ.

ಆದರೂ ರಾಜನಿಗೆ ಬಂದು ತಿಳಿಸಿದನು, "ನಾನು ಎಲ್ಲೆಡೆ ಹುಡುಕಿದೆ. ಆದರೆ, ನೀವು ಹೇಳಿದ ಬ್ರಹ್ಮಜ್ಞಾನಿ ಕಾಣಸಿಗಲಿಲ್ಲ. ಆದರೆ ಒಬ್ಬ ರೈಕ್ವ ಎನ್ನುವವನನ್ನು ಪತ್ತೆ ಹಚ್ಚಿದೆ. ಅವನ ಬಟ್ಟೆಬರೆ, ವರ್ತನೆ ನೋಡಿದರೆ ನೀವು ಹುಡುಕುತ್ತಿರುವವರು ಅವನಲ್ಲ ಎಂದು ತೋರುತ್ತದೆ. ಅವನಿಗೆ ಮೈಯೆಲ್ಲಾ ಕಜ್ಜಿ. ಅದನ್ನು ಕೆರೆಯುತ್ತಾ ಕುಳಿತಿದ್ದಾನೆ" ಎಂದನು. ಮಹಾತ್ಮರ ರೀತಿನೀತಿಗಳ ಬಗ್ಗೆ ಅರಿತಿದ್ದ ಜಾನಶ್ರುತಿ ರಾಜನು, ತಕ್ಷಣ ಇವನೇ ಆ ಬ್ರಹ್ಮಜ್ಞಾನಿ ಎಂದು ಅರಿತನು. ಕೂಡಲೇ ಗುರುದಕ್ಷಿಣೆಯಾಗಿ ಕೊಡಲು ಆರು ನೂರು ಗೋವುಗಳನ್ನೂ, ಒಂದು ಕಂಠೀಹಾರವನ್ನೂ ಮತ್ತು ಹೇಸರಗತ್ತೆಗಳಿಂದ ಎಳೆಯಲ್ಪಟ್ಟ ಒಂದು ರಥವನ್ನೂ ತೆಗೆದುಕೊಂಡು ರೈಕ್ವನಿದ್ದೆಡೆಗೆ ಹೋದನು.



ರೈಕ್ವನಿಗೆ ನಮಸ್ಕರಿಸಿ ರಾಜನು ಹೇಳಿದನು, "ಹೇ ರೈಕ್ವ, ನಾನು ನಿನಗೆ ಅರ್ಪಿಸಲು ಆರು ನೂರು ಗೋವುಗಳು, ಚಿನ್ನದ ಕಂಠೀಹಾರ, ಹೇಸರಗತ್ತೆಗಳಿಂದ ಎಳೆಯಲ್ಪಟ್ಟ ರಥ – ಎಲ್ಲವನ್ನೂ ತಂದಿದ್ದೇನೆ. ದಯವಿಟ್ಟು ಸ್ವೀಕರಿಸಿ ನನಗೆ ಬ್ರಹ್ಮೋಪದೇಶ ಮಾಡು." ಗುರುದಕ್ಷಿಣೆಯನ್ನು ಅರ್ಪಿಸಿ ವಿದ್ಯೆಯನ್ನು ಕಲಿಯಬೇಕು ಎನ್ನುವುದೇನೋ ಸರಿ. ಆದರೆ ಅದನ್ನು, ವಿದ್ಯೆಯನ್ನು ಖರೀದಿಮಾಡುವವನಂತೆ ನೀಡಬಾರದು. ಆದ್ದರಿಂದ ರೈಕ್ವನಿಗೆ ಇದು ಇಷ್ಟವಾಗಲಿಲ್ಲ. ಅವನು ರಾಜನನ್ನು ಚೆನ್ನಾಗಿ ತೆಗಳಿದನು. "ಇವೆಲ್ಲಾ ನಿನಗೇ ಇರಲಿ. ತೆಗೆದುಕೊಂಡು ಹಿಂತಿರುಗು" ಎಂದು ಮುಖ ತಿರುಗಿಸಿಕೊಂಡುಬಿಟ್ಟನು. ರಾಜನಿಗೆ ಅವಮಾನವಾಗಿ ದುಃಖದಿಂದ ಅರಮನೆಗೆ ಹಿಂತಿರುಗಿದನು.

ರಾಜನ ಮನಸ್ಸಿಗೆ ಶಾಂತಿ ಇಲ್ಲ; ಹೇಗಾದರೂ ವಿದ್ಯೆಯನ್ನು ಪಡೆಯಬೇಕೆಂಬ ಬಯಕೆ. ಅದಕ್ಕಾಗಿ ಮತ್ತೆ ರೈಕ್ವನ ಬಳಿಗೆ ಹೊರಟನು. ಈ ಬಾರಿ ಸಹಸ್ರ ಗೋವುಗಳು, ಕಂಠೀಹಾರ, ರಥ ಹಾಗೂ ಅವನ ಸೇವೆ ಮಾಡಲು ತನ್ನ ಮಗಳನ್ನೂ ಕರೆದುಕೊಂಡು ಹೊರಟನು. ವಿದ್ಯೆಯನ್ನು ಕಲಿಯಬೇಕೆಂಬ ಆಕಾಂಕ್ಷೆಯನ್ನು ರಾಜನಲ್ಲಿ ಕಂಡು, ರೈಕ್ವನು ಅವನು ತಂದಿದ್ದೆಲ್ಲವನ್ನೂ ಗುರುದಕ್ಷಿಣೆಯಾಗಿ ಸ್ವೀಕರಿಸಿ, ರಾಜನಿಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸಿದನು. ಅವನು ಉಪದೇಶಿಸಿದ ವಿದ್ಯೆಗೆ **'ಸಂವರ್ಗ ವಿದ್ಯೆ'** ಎಂದು ಹೆಸರಾಯಿತು.

ಸಂವರ್ಗ ಎಂದರೇನು? ಯಾವುದು ತನ್ನಲ್ಲಿ ಎಳೆದುಕೊಳ್ಳುವುದೋ ಅಥವಾ ಲಯಮಾಡಿಕೊಳ್ಳುವುದೋ ಅದಕ್ಕೆ **ಸಂವರ್ಗ** ಎಂದು ಹೆಸರು. ರೈಕ್ವನು ವಾಯುವನ್ನು ಸಂವರ್ಗ ವಸ್ತು ಎಂದು ಬೋಧಿಸಿದನು. ಕಾರಣ ಪ್ರಲಯಕಾಲದಲ್ಲಿ ಸೂರ್ಯಚಂದ್ರರ ಸ್ವರೂಪವು ನಾಶವಾಗುವಾಗ ತೇಜೋರೂಪವನ್ನು ಪಡೆದ ಅವು ವಾಯುವಿನಲ್ಲಿಯೇ ಲೀನವಾಗುತ್ತವೆ. ಆದ್ದರಿಂದ, ರೈಕ್ವನು ಬ್ರಹ್ಮಜ್ಞಾನವನ್ನು ಪಡೆಯಲು ಸಾಧಕನು ವಾಯುವಿನ ಮೇಲೆ ಧ್ಯಾನ ಮಾಡಬೇಕು ಎಂದು ಬೋಧಿಸಿದನು. ವಾಯುವಿನ ಮೇಲೆ ಹೇಗೆ ಧ್ಯಾನ ಮಾಡುವುದು? ಸಸ್ಯಗಳಾಗಲೀ, ಇತರ ಪ್ರಾಣಿಗಳಾಗಲೀ, ಮಾನವರಾಗಲೀ ವಾಯುವಿಲ್ಲದೆ ಬದುಕಲಾರವು. ಹೊರಗಡೆ ನಾವು ಯಾವುದನ್ನು **ವಾಯು** ಎಂದು ಕರೆಯುತ್ತೇವೆಯೋ, ಅದನ್ನೇ ದೇಹದ ಒಳಗಡೆ **ಪ್ರಾಣ** ಎಂದು ಕರೆಯುತ್ತೇವೆ. ಇವೆರಡಕ್ಕೂ ಬೇರೆ ಬೇರೆಯ ಹೆಸರುಗಳು ಇವೆಯೇ ಹೊರತು ಅವೆರಡೂ ಬ್ರಹ್ಮದ ಒಂದೇ ರೂಪಗಳಾಗಿವೆ. ಈ ರೀತಿ ಪ್ರಾಣವನ್ನು ಧ್ಯಾನಿಸುವ ಮೂಲಕ ಬ್ರಹ್ಮನನ್ನು ಅರಿಯಬಹುದು. ವಾಯುವು ಹೇಗೆ ಒಳಗೆ ಹೊರಗೆ ಎಲ್ಲೆಡೆ ಆವರಿಸಿಕೊಂಡಿದೆಯೋ, ಅದೇ ರೀತಿ ಬ್ರಹ್ಮವು ಎಲ್ಲವನ್ನೂ, ಅಂದರೆ ವಾಯುವನ್ನೂ ಸೇರಿ ಆಕ್ರಮಿಸಿಕೊಂಡಿದೆ; ಇದನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಎಂದು ರೈಕ್ವನು ಉಪದೇಶಿಸಿದನು.

ಇದನ್ನು ಮನದಟ್ಟು ಮಾಡಿಕೊಡಲು ಒಂದು ಕಥೆಯನ್ನು ಕೂಡ ಹೇಳಿದನು. ಒಂದು ಸಲ ಶೌನಕ ಮತ್ತು ಕಾಕ್ಷಸೇನಿ ಎಂಬ ಇಬ್ಬರು ಋಷಿಗಳು ಒಟ್ಟಿಗೆ ಊಟಮಾಡುತ್ತಿದ್ದರು. ಆಗ ಅಹಂಕಾರದಿಂದ ತುಂಬಿದ್ದ ಬ್ರಹ್ಮಚಾರಿಯೊಬ್ಬನು ಬಂದು ಆ ಋಷಿಗಳ ಬಳಿ ಭಿಕ್ಷೆ ಬೇಡಿದನು. ಆದರೆ ಅವರು ಅವನಿಗೆ ಏನನ್ನೂ ಕೊಡಲಿಲ್ಲ. ಆಗ ಅವನು ತನ್ನಲ್ಲಿರುವ ಬ್ರಹ್ಮನಿಗೆ ಭಿಕ್ಷೆ ನಿರಾಕರಣೆಯಾಯಿತೆಂದು ಹೇಳಿದನು. ಅದಕ್ಕೆ ಅವರು "ಬ್ರಹ್ಮನು ನಿನ್ನೊಬ್ಬನಲ್ಲೇ ಏನಿಲ್ಲ. ಅವನು ಆಶ್ರಯದಾತನಾಗಿ ಎಲ್ಲ ವಸ್ತುಗಳಲ್ಲಿಯೂ ಇದ್ದಾನೆ. ಎಲ್ಲಕ್ಕೂ ಬ್ರಹ್ಮವೇ ಮೂಲ. ಬ್ರಹ್ಮವೊಂದೇ ಸತ್ಯ" ಎಂದು ಹೇಳಿ ಅವನ ಅಹಂಕಾರವನ್ನು ತಗ್ಗಿಸಿದರು; ನಂತರ ಅವನಿಗೆ ಊಟೋಪಚಾರಗಳನ್ನಿತ್ತರು.

ಹೀಗೆ ರೈಕ್ವನ ಉಪದೇಶವನ್ನು ಜಾನಶ್ರುತಿಯು ಕೇಳಿಸಿಕೊಂಡನು. ತೀಕ್ಷ್ಣಬುದ್ಧಿಯುಳ್ಳವನೂ, ಬ್ರಹ್ಮಸಾಕ್ಷಾತ್ಕಾರಕ್ಕಾಗಿ ತೀವ್ರ ಬಯಕೆ ಉಳ್ಳವನೂ ಆದ ಅವನು ರೈಕ್ವನ ಉಪದೇಶವನ್ನು ಸರಿಯಾಗಿ ಅರ್ಥಮಾಡಿಕೊಂಡು ಬ್ರಹ್ಮಜ್ಞಾನಿಯಾದನು.

## ವಿನೋದದಿಂದ ವೇದಾಂತ

**ಸ್ಥ**ಳೀಯ ಮಿಲಿಟರಿ ರೈಫಲ್ ಅಭ್ಯಾಸದ ಪ್ರದೇಶದಲ್ಲಿ ಸಾರ್ಜೆಂಟ್ ಮ್ಯಾಕ್‌ನ ಕೈಕೆಳಗೆ ಹುಡುಗರೆಲ್ಲರೂ ಚೆನ್ನಾಗಿಯೇ ಷೂಟ್ ಮಾಡುತ್ತಿದ್ದರು. ಎಲ್ಲರೂ ಎಂದರೆ ಬ್ಲೂ ಎಂಬುವನೊಬ್ಬನನ್ನು ಬಿಟ್ಟು ಉಳಿದವರೆಲ್ಲರೂ. ಪುನಃ ಪುನಃ ಅವನು ಗುರಿಯಿಂದ ದೂರಕ್ಕೇ ಗುಂಡು ಹಾರಿಸುತ್ತಿದ್ದನು. ಸಾರ್ಜೆಂಟನು ಶಾಪ ಹಾಕಿದ, ಭಯಂಕರವಾಗಿ ಶಿಕ್ಷಿಸುವ ಬೆದರಿಕೆ ಹಾಕಿದ, ಏನೂ ಉಪಯೋಗವಾಗಲಿಲ್ಲ. ಕಡೆಗೂ ತಡೆಯಲಾರದೆ ಬೊಬ್ಬಿರಿದ, "ಅಯ್ಯೋ ದೇವರೆ! ಪೂರಾ ಸೈನ್ಯದಲ್ಲಿಯೇ ನಿನ್ನಷ್ಟು ಕೆಟ್ಟದಾಗಿ ಷೂಟ್ ಮಾಡುವವನಿಲ್ಲವೆನಿಸುತ್ತದೆ. ಹುಲ್ಲು ಒಟ್ಟುವ ಮನೆಯ ಗೋಡೆಯನ್ನು ಸಹಾ ನೀನು ಹತ್ತಡಿ ದೂರದಿಂದ ಕೂಡ ಷೂಟ್ ಮಾಡಲಾರೆ." ಅವನ ತಾಳ್ಮೆ ಪೂರಾ ಹೋಗಿತ್ತು. ಮುಂದುವರಿದು ಹೇಳಿದ: "ನೀನೇಕೆ ಆ ಗಾಡಿಖಾನೆಯ ಹಿಂದೆ ಹೋಗಿ ನಿನ್ನ ಮೂರ್ಖ ಶರೀರಕ್ಕೇ ಗುರಿಯಿಟ್ಟು ಗುಂಡು ಹಾರಿಸಿಕೊಳ್ಳಬಾರದು?" ಆ ಸಾಮಾನ್ಯ ಸೈನಿಕ ಸೊಗಸಾಗಿ ಸೆಲ್ಯೂಟ್ ಹೊಡೆದು ರೈಫಲ್‌ನ್ನು ಭುಜಕ್ಕೇರಿಸಿ ಆ ಗಾಡಿಖಾನೆಯ ಹಿಂದಕ್ಕೆ ಶಿಸ್ತಿನ ನಡೆಯಲ್ಲಿ ಹೋದ. ಮಾತಾಡಲಾರದಷ್ಟು ಮೂಕವಿಸ್ಮಿತನಾಗಿ ಸಾರ್ಜೆಂಟ್ ನಿಂತಲ್ಲೇ ನಿಂತಿದ್ದ. "ಢಂ" ಎನ್ನುವ ಶಬ್ದ ಆ ಮೌನವನ್ನು ಭೇದಿಸಿತು. "ಅಯ್ಯೋ ದೇವರೆ!" ಎಂದು ಸಾರ್ಜೆಂಟ್ ಮ್ಯಾಕ್ ನರಳಿದ, "ಅವನು ಹಾಗೇ ಮಾಡಿ ಬಿಟ್ಟ, ತನ್ನನ್ನು ತಾನೇ ಗುಂಡಿಕ್ಕಿ ಕೊಂದುಕೊಂಡೇಬಿಟ್ಟ." ಮರುಕ್ಷಣವೇ ಗಾಡಿಖಾನೆಯ ಇನ್ನೊಂದು ಪಾರ್ಶ್ವದಿಂದ ಸೊಗಸಾದ ಶಿಸ್ತಿನ ನಡೆಯಲ್ಲಿ ನಡೆಯುತ್ತಾ ಬ್ಲೂ ಸಾರ್ಜೆಂಟ್ ಮುಂದೆ ಬಂದು ನಿಂತು ಸೆಲ್ಯೂಟ್ ಹೊಡೆದು ಸ್ವಲ್ಪವೂ ಹಲ್ಲು ಕಿರಿಯದೆ ಹೇಳಿದ, "ಪುನಃ ಗುರಿ ತಪ್ಪಿತು, ಸಾರ್ಜೆಂಟ್!" **ನಮ್ಮ ಅವಸ್ಥೆಯೂ ಹಾಗೆಯೇ. ಇಡೀ ಜಗತ್ತಿನ ಜೊತೆಗೆ ಹೇಗೆ ನಡೆದುಕೊಳ್ಳುತ್ತೇವೆಯೋ, ಹಾಗೆಯೇ ನಮ್ಮಲ್ಲೂ ನಡೆದುಕೊಳ್ಳುತ್ತೇವೆ. ಬೇರೆಯವರನ್ನು ದ್ವೇಷಿಸುತ್ತಿದ್ದರೆ, ನಮ್ಮನ್ನೂ ದ್ವೇಷಿಸಿಕೊಳ್ಳುತ್ತೇವೆ; ಬೇರೆಯವರಿಗೆ ಕೆಡುಕು ಮಾಡಿದರೆ, ನಮಗೂ ಅದನ್ನೇ ಮಾಡಿಕೊಳ್ಳುತ್ತೇವೆ.** (ಆಸ್ಟ್ರೇಲಿಯಾ ಕಥೆ)

**ಪು**ಟ್ಟ ತಾರೋ ಶಾಲೆಯಿಂದ ಮನೆಗೆ ಹಿಂದಿರುಗಿದವನೇ ತಂದೆಯ ಬಳಿ ಹೋಗಿ ಕೇಳಿದ, "ಅಪ್ಪಾ, ನನಗೆ ಗಣಿತದಲ್ಲಿ ನೂರಕ್ಕೆ ನೂರು ನಂಬರು ಎಂದು ಹೇಳಿದ್ದರೆ ನೀನೇನು ಮಾಡುತ್ತಿದ್ದೆ?" ತಂದೆ ಹೇಳಿದ, "ಏನು, ಅಷ್ಟೊಂದೇ? ನಾನು ಮೂರ್ಛೆಯೇ ಹೋಗಿಬಿಡುತ್ತಿದ್ದೆ." "ನೋಡು ಅಪ್ಪ, ನನಗೆ ನೀನು ಮೂರ್ಛೆ ಹೋಗುವುದು ಸ್ವಲ್ಪವೂ ಇಷ್ಟವಿಲ್ಲ. ಅದಕ್ಕೋಸ್ಕರ ಐವತ್ತು ನಂಬರುಗಳಿಗಿಂತ ಜಾಸ್ತಿ ಪಡೆದುಕೊಳ್ಳದಂತೆ ನನ್ನನ್ನು ಎಚ್ಚರಿಕೆಯಿಂದ ನಿಯಂತ್ರಿಸಿಕೊಂಡೆ." **ಹಾಗೆಯೇ ನಮ್ಮ ದುರ್ಬಲತೆಗಳನ್ನು ಮುಚ್ಚಿಕೊಳ್ಳಲು ಅನೇಕ ಸಬೂಬುಗಳನ್ನು ಹೇಳುತ್ತೇವೆ. ನಮ್ಮ ದೌರ್ಬಲ್ಯಗಳ ಪ್ರಾಮಾಣಿಕ ವಿಶ್ಲೇಷಣೆ ಮಾಡಿಕೊಂಡಾಗ ಮಾತ್ರ, ನಮ್ಮ ವ್ಯಕ್ತಿತ್ವವನ್ನು ಹೆಚ್ಚು ಪರಿಶುದ್ಧವನ್ನಾಗಿಯೂ, ಉನ್ನತವನ್ನಾಗಿಯೂ ಮಾಡಿಕೊಳ್ಳಲು ಸಾಧ್ಯ.** (ಜಪಾನಿ ಕಥೆ)